ಯೋಜನೆಯ ಹೆಸರು	ಅಂದಾಜು ಲಕ್ಷ ರೂ. ಗಳಲ್ಲಿ	ಅಂದಾಜು ನೀರಾವರಿ ಕ್ಷೇತ್ರ ಹೆಕ್ಟೇರ್‌ಗಳಲ್ಲಿ
೧. ಬಾದಾಮಿ ತಾಲ್ಲೂಕು		
ಪಿತ ನೀರಾವರಿ ಯೋಜನೆ ಚಿಕ್ಕನಸಬಿ	೯೪.೭೮	೪೮೬
೨. ಜಮಖಂಡಿ ತಾಲ್ಲೂಕು		
ಪಿತ ನೀರಾವರಿ ಯೋಜನೆ ಆಡಿಹುಡಿ ತೊದಲಬಾಗಿ	೩೨೪.೮೫೪	೧೪೯೦

ಈ) ಹೌದು ಘಟ್ಟಿ ಬಳಿ ಪಿತ ನೀರಾವರಿ ಯೋಜನೆ.

ಉ) ೧೯೯೨-೯೩ರ ಸಾಲಿನಲ್ಲಿ ಕಾರ್ಯಗತ ಗೊಳಿಸಲು ಕ್ರಮ ಕೈಗೊಳ್ಳಲಾಗುವುದು.

ಬಾಗೇಪಲ್ಲಿ ತಾಲ್ಲೂಕು ಚೇಳೂರು ಮಂಡಲ ದೊಡ್ಡ ಹಳ್ಳಿಯಲ್ಲಿ ನಿವೇಶನಗಳ ವಿತರಣೆ

೩೮೪ (೨೧೯೪) ಶ್ರೀ ಚೌಡರೆಡ್ಡಿ (ಚಿಂತಾಮಣಿ):- ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ;

ಅ) ಬಾಗೇಪಲ್ಲಿ ತಾಲ್ಲೂಕು, ಚೇಳೂರು ಮಂಡಲ, ದೊಡ್ಡಿ ಹಳ್ಳಿ ಗ್ರಾಮದ ಸರ್ವೆ ನಂ. ೫೦ರ ಜಮೀನನ್ನು ಗ್ರಾಮದ ನಿವೇಶನ ರಹಿತ ಫಲಾನುಭವಿಗಳಿಗೆ ಹಂಚಲು ಸರ್ಕಾರದಿಂದ ಭೂ ಸ್ವಾಧೀನಪಡಿಸಿಕೊಳ್ಳಲಾಗುತ್ತೆ. ಹಾಗಿದ್ದಲ್ಲಿ ಭೂ ಸ್ವಾಧೀನಪಡಿಸಿಕೊಂಡ ತಾರೀಖಿನ್ನು ತಿಳಿಸಿ?

ಆ) ಭೂ ಸ್ವಾಧೀನಪಡಿಸಿಕೊಂಡ ಪ್ರದೇಶವನ್ನು ನಿವೇಶನಗಳಾಗಿ ವಿಂಗಡಿಸಿ ಎಷ್ಟು ಜನಕ್ಕೆ ಹಂಚಲಾಗಿದೆ? ಹಾಗೇ ಹಂಚಿಕೆ ಮಾಡಿದ ಫಲಾನುಭವಿಗಳ ಹೆಸರು ಮತ್ತು ಅಳತೆ ವಿವರವಾಗಿ ತಿಳಿಸುವುದು.

ಇ) ಮೇಲ್ಕಂಡ ಜಮೀನಿನಲ್ಲಿ ಸರ್ಕಾರದ ನಿವೇಶನಗಳನ್ನು ಹಂಚಿದ್ದರೂ ಸಹ ನಿವೇಶನಗಳ ಕಲ್ಲುಗಳನ್ನು ಕಿತ್ತು ಹಾಕಿ ಫಲಾನುಭವಿಗಳಿಗೆ ಹಿಂದಿನ ಮಾಲೀಕರು ತೊಂದರೆ ಕೊಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಬಂದಿದ್ದಲ್ಲಿ ಸದರಿ ಫಲಾನುಭವಿಗಳಿಗೆ ಮನೆ ಕಟ್ಟಿಕೊಳ್ಳಲು ಸರ್ಕಾರವು ಯಾವ ರೀತಿಯ ರಕ್ಷಣೆಯನ್ನು ಕೊಡುವುದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಕಂದಾಯ ಸಚಿವರು):-

ಅ) ಹೌದು. ೨೬-೧೧-೮೨.

ಆ) ನಿವೇಶನ ವಿಂಗಡಿಸಿ ೨೯ ಜನರಿಗೆ ೪೫ - ೫೦ ಅಡಿ ನಿವೇಶನ ಹಂಚಿರುತ್ತೆ. ನಿವೇಶನ ಪಡೆದವರ ಪಟ್ಟಿಯು ಕೆಳಗಿನಂತಿದೆ. ೧) ನಾರಾಯಣಪ್ಪ ಬಿನ್ ಮೈಲಾರಪ್ಪ, ೨) ಬೈಯಪ್ಪ ಬಿನ್

ವೆಂಕಟಪ್ಪ, ೩) ಗಂಗಮ್ಮ ಕೋಂ ಚಿನ್ನರಸಪ್ಪ, ೪) ಗಂಗಮ್ಮ ಕೋಂ ಬೈಯಪ್ಪ, ೫) ಚಿನ್ನಕದರಪ್ಪ ಬಿನ್ ಈರಪ್ಪ, ೬) ಲಕ್ಷ್ಮಿನರಸಮ್ಮ ಕೋಂ ನರಸಪ್ಪ, ೭) ಕದರಪ್ಪ ಬಿನ್ ಈರಪ್ಪ, ೮) ಚಿನ್ನಗಂಗಪ್ಪ ಬಿನ್ ವೆಂಕಟಪ್ಪ, ೯) ವೆಂಕಟರಾಯಪ್ಪ ಬಿನ್ ವೆಂಕಟರಾಯ, ೧೦) ವೆಂಕಟರಾಯಪ್ಪ ಬಿನ್ ವೆಂಕಟಪ್ಪ, ೧೧) ಅಂಜಿನಪ್ಪ ಬಿನ್ ಪೆದ್ದವೆಂಕಟಪ್ಪ, ೧೨) ರಾಮಕ್ಕ ಕೋಂ ಮುತ್ತಣ್ಣ, ೧೩) ಚಿನ್ನಪ್ಪ ಬಿನ್ ಸಿದ್ದಪ್ಪ, ೧೪) ಶಿವಮ್ಮ ಕೋಂ ಪೆದ್ದಣ್ಣ, ೧೫) ವೆಂಕಟಪ್ಪ ಬಿನ್ ಗಂಗಪ್ಪ, ೧೬) ವೆಂಕಟರಾಯಪ್ಪ ಬಿನ್ ಸಿದ್ದಪ್ಪ, ೧೭) ಮುದ್ದಣ್ಣ ಬಿನ್ ನಂಜಪ್ಪ, ೧೮) ಪಾಪಮ್ಮ ಕೋಂ ರಾಜಣ್ಣ, ೧೯) ಚಿನ್ನಮ್ಮ ಕೋಂ ಪೆದ್ದನಲ್ಲ ನಾಗಪ್ಪ, ೨೦) ವೆಂಕಟರಾಯಪ್ಪ ಬಿನ್ ಡೋಬಿ ವೆಂಕಟಪ್ಪ, ೨೧) ಬೈಯಪ್ಪ ಬಿನ್ ಮುದ್ದಣ್ಣ, ೨೨) ಬೈಯಪ್ಪ ಬಿನ್ ವೆಂಕಟರಾಯಪ್ಪ, ೨೩) ಬೈಯಪ್ಪ ಬಿನ್ ಬೈಯಪ್ಪ, ೨೪) ಬೈಯಪ್ಪ ಬಿನ್ ಮುದ್ದಣ್ಣ, ೨೫) ನರಸಿಂಹಪ್ಪ ಬಿನ್ ವೆಂಕಟಪ್ಪ, ೨೬) ಗಂಗಾಚಾರಿ ಬಿನ್ ವೆಂಕಟಪ್ಪ, ೨೭) ಪೆದ್ದಗಂಗಾಲಪ್ಪ ಬಿನ್ ನರಸಪ್ಪ, ೨೮) ಮುದ್ದಣ್ಣ ಬಿನ್ ನರಸಿಂಹಪ್ಪ, ೨೯) ಬೈಯಪ್ಪ ಬಿನ್ ಸಿದ್ದಪ್ಪ.

೧) ಇಲ್ಲ.

೨) ಕಲಂ (೧) ಉತ್ತರದನ್ವಯ ಉದ್ಭವಿಸುವುದಿಲ್ಲ.

ಬೆಂಗಳೂರಿನಲ್ಲಿ ಒಳಾಂಗಣ ಕ್ರೀಡಾಂಗಣದ ನಿರ್ಮಾಣ

೩೮೫ (೧೪೭೦) ಶ್ರೀ ಪೆರಿಕಲ್ ಎಂ. ಮಲ್ಲಪ್ಪ (ಚಿಕ್ಕಪೇಟೆ):- ಮಾನ್ಯ ಯುವಜನ ಸೇವಾ, ಕ್ರೀಡಾ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ;

ಅ) ಬೆಂಗಳೂರಿನಲ್ಲಿ ಒಳಾಂಗಣ ಕ್ರೀಡಾಂಗಣ ನಿರ್ಮಾಣ ಮಾಡುವ ಪ್ರಸ್ತಾವನೆ ಇದೆಯೇ?

ಆ) ಹಾಗಿದ್ದಲ್ಲಿ ಯಾವ ಸ್ಥಳವನ್ನು ಆಯ್ಕೆ ಮಾಡಲಾಗಿದೆ?

ಇ) ಇದರ ಅಂದಾಜು ವೆಚ್ಚ ಎಷ್ಟು?

ಈ) ಕೇಂದ್ರ ಸರ್ಕಾರದಿಂದ ನಿರೀಕ್ಷಿಸಿರುವ ಅಂದಾಜು ಮೊತ್ತ.

ಉ) ಪ್ರಸ್ತಾಪಿಸಿರುವ ಕ್ರೀಡಾಂಗಣದ ಸ್ಥಳಾವಕಾಶ ಎಷ್ಟು?

ಶ್ರೀ ಎಸ್. ರಮೇಶ್ (ಯುವಜನ ಸೇವಾ, ಕ್ರೀಡಾ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು):-

ಅ) ಹೌದು.

ಆ) ಸೂಕ್ತ ನಿವೇಶನ ಆಯ್ಕೆ ಪರಿಶೀಲನೆಯಲ್ಲಿದೆ.

ಇ) ಪರಿಶೀಲನೆಯಲ್ಲಿದೆ.

ಈ) ಕೇಂದ್ರ ಸರ್ಕಾರಕ್ಕೆ ಯೋಜನೆಯ ಅಂದಾಜು ವೆಚ್ಚವನ್ನು ಅನುಸರಿಸಿ ಪ್ರಸ್ತಾವನೆಯನ್ನು ಸಲ್ಲಿಸಬೇಕಾಗಿದೆ.

ಉ) ಸುಮಾರು ೫೦೦೦ ಜನರಿಗೆ ಸ್ಥಳಾವಕಾಶ ಮಾಡಲು ಉದ್ದೇಶಿಸಲಾಗಿದೆ.